ತರಗತಿ : X ಅಂಕ : 100

ಮುಚ್ಚಿ ಶಾಲೆಗೂ ತರುತ್ತಾನೆ. ಇದನ್ನು ಕಂಡ ಸುಮಂತ್‌ನಿಗೂ ಮೊಬೈಲ್ ಪಡೆಯಬೇಕು ಎಂಬ ಆಶೆಯಾಗುತ್ತದೆ. ಮೊಬೈಲ್ ಇದ್ದರೆ ಆಟ ಆಡಬಹುದು ಎಂದು ಯೋಚಿಸುತ್ತಾನೆ.

**a) i) ಸುಮಂತ್ ಯೋಚಿಸುವುದು ಸರಿಯೆ?**

**ii) ಏಕೆ? ಕಾರಣ ತಿಳಿಸಿ.**

**b) i) ಹಮ್‌ದಾನ್ ಮಾಡಿರುವುದು ಸರಿಯೇ?**

**ii) ಏಕೆ? ಕಾರಣ ತಿಳಿಸಿ.**

**c) ನೀನು ಹತ್ತನೇ ತರಗತಿಯ ವಿದ್ಯಾರ್ಥಿಯಾಗಿ ಅವರಿಗೆ ಎರಡು ಸಲಹೆ ನೀಡು.**

2. ಸ್ನೇಹ ತನ್ನ ತಂದೆ ತಾಯಿಯ ಐದು ಮಕ್ಕಳಲ್ಲಿ ಮೂರನೆಯವಳು. ತಂದೆ–ತಾಯಿ ಕೂಲಿ ಕೆಲಸ ಮಾಡಿ ಕುಟುಂಬ ಸಾಗಿಸುತ್ತಾರೆ. ಬಡತನದ ನಡುವೆಯೂ ಮಕ್ಕಳು ಓದಬೇಕೆಂಬ ಆಸೆ ತಂದೆ ತಾಯಿಗಿದೆ. ಮೊದಲನೆ ಮತ್ತು ಎರಡನೆಯವರು ಕಾಲೇಜಿನಲ್ಲಿ ಓದುತಿದ್ದಾರೆ. ಆದರೆ ಸ್ನೇಹ ಓದನ್ನು ಕಡೆಗಣಿಸಿ ಟಿ.ವಿ.ಯನ್ನೇ ನೆಚ್ಚಿಕೊಂಡಿದ್ದಾಳೆ.

**a) i) ಸ್ನೇಹ ಮಾಡಿರುವುದು ಸರಿಯೆ?**

**ii) ಏಕೆ? ಕಾರಣ ಕೊಡು**

**b) ಸ್ನೇಹಳಲ್ಲಿ ನೀವು ಅಪೇಕ್ಷಿಸುವ ಯಾವುದಾದರೂ ಎರಡು ಬದಲಾವಣೆಗಳಾವುವು?**

**c) ಸ್ನೇಹಗಳಿಗೆ ಸರಿ ದಾರಿಗೆ ತರಲು ನೀವು ಕೊಡುವ ಎರಡು ಸಲಹೆಗಳನ್ನು ಬರೆಯಿರಿ.**

3. ದುಷ್ಟಕೂಟದೊಂದಿಗೆ ಕೂಡಿಕೊಂಡ ಶೈಲೇಶ್ ತಾಯಿಯ ಮಾತನ್ನು ಕೇಳುವುದಿಲ್ಲ. ಶಿಕ್ಷಕರಿಗೆ ಅವಿಧೇಯನಾಗಿದ್ದಾನೆ. ಪ್ರತಿಸಲ ದೂರನ್ನು ಕೇಳಿದ ತಂದೆ ತಾಯಿ ಬೇಸರ ವ್ಯಕ್ತಪಡಿಸುತ್ತಾರೆ, ಅವನ ಗೆಳೆಯರ ಬಗ್ಗೆ ದೂರುತ್ತಾರೆ.

**a) ಶೈಲೇಶ್ ದುಷ್ಟಕೂಟವನ್ನು ಸೇರಿದುದರಿಂದ ಆಗಬಹುದಾದ ಎರಡು ಪರಿಣಾಮಗಳನ್ನು ಬರೆಯಿರಿ.**

**b) i) ಶೈಲೇಶ್‌ನ ತಂದೆ ತಾಯಿ ಇತರ ಗೆಳೆಯರನ್ನು ದೂರುವುದು ಸರಿಯೇ?**

**ii) ಅವರು ಏನು ಮಾಡಬಹುದು?**

**c) ನಿನ್ನ ಗೆಳೆಯ/ಗೆಳತಿಯ ಆಯ್ಕೆ ಮಾಡುವಾಗ ಗಮನದಲ್ಲಿರಿಸಬೇಕಾದ ಪ್ರಮುಖ ಎರಡು ಅಂಶಗಳು ಯಾವುವು?**



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 10–01–2015** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 100**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. ನಾವು ಹಣ ಕೊಟ್ಟು ಕೊಂಡುಕೊಳ್ಳದೆ ಇರುವುದರಿಂದ ______ ದ ಮಹತ್ವವನ್ನು ಅರಿತು ಕೊಂಡಿಲ್ಲ.

   (ವಸ್ತುಗಳು; ಮೌಲ್ಯಗಳು; ಸಮಯ)

2. ತನ್ನ ಧರ್ಮವನ್ನು ಅನುಸರಿಸುವಾಗ ಇತರ ಧರ್ಮದ ಸಂಪ್ರದಾಯ, ಸಂಸ್ಕೃತಿಯನ್ನು ಗೌರವಿಸುವುದು ______.

   (ಒಳ್ಳೆಯ ಅಭ್ಯಾಸ; ಸಮಾಜವಾದ; ಸಾರ್ವತ್ರಿಕವಾದ)

3. ಮತಾಂಧತೆ ಮತ್ತು ಮೂಲಭೂತವಾದ ಸಮಾಜದಲ್ಲಿ ______ ಕಾರಣವಾಗುತ್ತದೆ.

   (ಸಹೋದರತೆಗೆ; ಹಿಂಸಾಚಾರಕ್ಕೆ; ಸಮಾನತೆಗೆ)

4. 'ನಾಯಕ' ನಾದವನು ನೀತಿ ನ್ಯಾಯದ ವ್ಯಕ್ತಿಯಾಗಿದ್ದು ತನ್ನ ನಡವಳಿಕೆಯಲ್ಲಿ ______ ಪ್ರತಿಬಿಂಬಿಸಬೇಕು.

   (ಸಹಕಾರವನ್ನು; ನಿಷ್ಪಕ್ಷಪಾತವನ್ನು; ಪ್ರತಿಭೆಯನ್ನು)

5. ಒಬ್ಬ ವ್ಯಕ್ತಿ ಇತರ ಜೀವಿ, ಸಮಾಜ ಮತ್ತು ನಿಸರ್ಗದೊಂದಿಗೆ ಸಾಮಾನ್ಯ ರೀತಿಯಲ್ಲಿ ಸಂಬಂಧವನ್ನು ಬೆಳೆಸಿಕೊಳ್ಳುವುದನ್ನು ______ ಎನ್ನುವರು.

   (ಸಾಮಾಜಿಕ ಪರಿಜ್ಞಾನ; ಸಾಮಾಜಿಕ ಸಹಕಾರ; ಸಮಾಜಿಕ ಪಿಡುಗು)

6. ಪ್ರತಿಯೊಬ್ಬ ಮಾನವನಿಗೆ ______ ಯಿಂದ ಜೀವಿಸಲು ಮಾನವ ಹಕ್ಕುಗಳು ಅಗತ್ಯ.

   (ಘನತೆ; ಗೌರವ; ಸುಖ–ಶಾಂತಿ)

7. ಬೆರಳುಗಳು ಐದು ______ ಒಂದೇ.

   (ಉದ್ದೇಶ; ಸಂಬಂಧ; ಕಾಯಕ)

8. ಆದ್ಯಾತ್ಮಿಕತೆಗೆ ______ ಪೀಠಿಕೆಯಾಗಿರುತ್ತದೆ.

   (ಘನತೆ; ದೀನತೆ; ಸಂವೇದನಾ ಶೀಲತೆ)

9. 'ಶಾಂತಿನಿಕೇತನ' ವನ್ನು ಸ್ಥಾಪಿಸಿದವರು ________
(ನೆಹರೂ; ಶಾಸ್ತ್ರೀ; ಠಾಗೋರ್)

10. ಇದು ಎಲ್ಲರಿಗೂ ಸಿಕ್ಕಿರುವ ಅದ್ಭುತವಾದ ಕೊಡುಗೆ ________
(ಮುಖಂಡತ್ವ; ಜೈವಿಕ ಜನನ; ಪ್ರೇರಿತ ಜನನ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 10x1=10**

1. ಓದಲು ಸಮಯವಿರಲಿ ಅದು ______ ಬುಗ್ಗೆ.
2. ಸಂವೇದನಾಶೀಲತೆ ಸಂತೋಷ ಮತ್ತು ಆರೋಗ್ಯಕರ ಜೀವನದ _____ ಆಗಿದೆ.
3. 'ಜೀವಂತ ಸಂತ' ಎಂದು ಪ್ರಖ್ಯಾತರಾದವರು ________
4. ಭಾರತದ ಸಂವಿಧಾನದ ಶಿಲ್ಪಿ ________.
5. ಮಾನವ ಘನತೆಯ ಮೂಲ ________.
6. ಎಲ್ಲಾ ಸುಗುಣಗಳ ಭದ್ರ ಆಸ್ತಿವಾರ ________
7. ಸರಿ ಮತ್ತು ತಪ್ಪುಗಳನ್ನು ಕಂಡುಕೊಳ್ಳುವ ನಿಪುಣತೆಯೇ ________
8. ಸಂವಾದ ಮಾಡುವಾಗ ನಮ್ಮಲ್ಲಿ _______ ಇರಬೇಕು.
9. ಮಾನವ ಸ್ವಭಾವದ ಪರಿಪೂರ್ಣತೆ __________ ಕಾರ್ಯರೂಪಕ್ಕೆ ತರುವಲ್ಲಿ ಅಡಕವಾಗಿದೆ.
10. ಸಮಯ ಮತ್ತು _______ ಯಾರನ್ನು ಕಾಯುವುದಿಲ್ಲ.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ವೈವಿಧ್ಯತೆ ಜೀವನಕ್ಕೆ | – | ಅಂಗಾಂಗಗಳು ಹಲವಾರು. |
| 2. ದೇಹ ಒಂದೇ | – | ಅದನ್ನು ಉಪಯೋಗಿಸಬಹುದು. |
| 3. ಮುಖಂಡನಾದವನು | – | ಹಸ್ತದಲ್ಲಿರುವ ಹಣ |
| 4. ಇಂದು ಎಂಬುದು | – | ಹೊಸತನ ತರುತ್ತದೆ |
| 5. ದಿನವನ್ನು ತಡೆಯಲಾಗದು | – | ಪ್ರೇರಣೆ ಕೊಡುತ್ತಾನೆ. |

**IV. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಮೂರು ಹಂತದ ಸಂವೇದನಾ ಶೀಲತೆ ಯಾವುದು?
2. ಒಂದು ತಿಂಗಳು ಹಾಗೂ ಒಂದು ದಿನಕ್ಕೆ ಬೆಲೆ ಕಟ್ಟಲು ಯಾರನ್ನು ಕೇಳಬೇಕು?
3. ಬಹುರೂಪಿ ಸಮಾಜ ಎಂದರೇನು?



4. ಮುಖಂಡ ಎಂದರೆ ಯಾರು?
5. ಮಾನವ ಹಕ್ಕುಗಳೆಂದರೇನು?

**V.ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಐದು ವಾಕ್ಯಗಳಲ್ಲಿ ಉತ್ತರಿಸಿರಿ: 4x5=20**

1. "ದೀನತೆ ಎಂಬುದು ಒಂದು ಒಳ್ಳೆಯ ಗುಣ" ಐದು ಕಾರಣಗಳನ್ನು ಬರೆಯಿರಿ.
2. "ಮದರ್ ತೆರೆಸಾ ಒಬ್ಬ ಚೇತನಪೂರ್ಣ" ವ್ಯಕ್ತಿ ಹೇಗೆ?
3. ಮುಖಂಡ ಪರಿಣಾಮಕಾರಿಯಾಗಬೇಕಾದರೆ ತನ್ನನ್ನೇ ತೊಡಗಿಸಿಕೊಳ್ಳಬೇಕಾದ ಕೆಲಸಕಾರ್ಯಗಳು ಯಾವುವು?
4. ವಿದ್ಯಾರ್ಥಿಗಳು ಸಮಯ ಪೋಲು ಮಾಡುವ ಸಂದರ್ಭಗಳು ಯಾವುದು?
5. ಮಾನವ ಘನತೆಯ ಬಗ್ಗೆ ಗಾಂಧೀಜಿಯವರಿಗಾದ ಅನುಭವವೇನು?
6. ಅಂಬೇಡ್ಕರ್ ಜೀವನದಿಂದ ನಾವು ಏನನ್ನು ಕಲಿತುಕೊಳ್ಳಬಹುದು?

**VI. ಕೆಳಗಿನ ನಾಲ್ಕು ಪ್ರಶ್ನೆಗಳನ್ನು ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 4x7=28**

1. ಸಾಮಾಜಿಕ ಪರಿಜ್ಞಾನದಲ್ಲಿ ನಮಗೆ ಯಾವುದರ ಬಗ್ಗೆ ಪ್ರಜ್ಞೆ ಇರಬೇಕು?
2. ವಿದ್ಯಾರ್ಥಿಗಳು ಸಮಯದ ಉಪಯುಕ್ತ ಬಳಕೆಯನ್ನು ಹೇಗೆ ಮಾಡುಬಹುದು?
3. ಮುಖಂಡನಾಗಲು ಬಯಸುವವನು ತನ್ನಲ್ಲಿ ಯಾವ ಗುಣಗಳನ್ನು ಬೆಳೆಸಿಕೊಳ್ಳಬೇಕು?
4. 'ನಮ್ಮ ಸಮಾಜ ವೈವಿಧ್ಯತೆಯ ಸಮಾಜ' ಎಂಬುದನ್ನು ವಿವರಿಸಿ.
5. ಮಾನವ ಹಕ್ಕುಗಳನ್ನು ಬರೆದು ವಿವರಿಸಿ.
6. ಗೆಳೆತನ ನಾಶ ಮಾಡುವ ಅಂಶಗಳು ಯಾವುವು? ಗೆಳೆತನ ಕಾಪಡಲು ಏನು ಮಾಡಬೇಕು?

**VII. ಕೆಳಗಿನ ಯಾವುದಾದರೂ ಒಂದು ವಿಷಯದ ಬಗ್ಗೆ ನಿಮ್ಮ ಅನಿಸಿಕೆ ಬರೆಯಿರಿ: 5x1=5**

1. ಸಮಯ ಅಮೂಲ್ಯ ಸಂಪನ್ಮೂಲ.
2. ಸುಗುಣಗಳ ಅಸ್ತಿವಾರ ದೀನತೆ.
3. ಇತರರನ್ನು ಗೌರವ ಮತ್ತು ಘನತೆಯಿಂದ ಕಾಣಬೇಕು.

**VIII. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಸುಮಂತ್ ಮತ್ತು ಹಮ್‌ದಾನ್ 10ನೇ ತರಗತಿಯ ವಿದ್ಯಾರ್ಥಿಗಳು. ಮನೆಯಲ್ಲಿ ಹಮ್‌ದಾನ್ ಹಠ ಹಿಡಿದು ಮೊಬೈಲ್ ಕೊಡಿಸುವಂತೆ ಮಾಡುತ್ತಾನೆ. ಅದನ್ನು ಕದ್ದು